ಅ) ಮೈಸೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಸತತ ಮಳೆಯಿಂದಾಗಿ ಎಷ್ಟು ಕೆರೆಕಟ್ಟೆಗಳು ಒಡೆದಿರುತ್ತವೆ ಮತ್ತು ಎಷ್ಟು ರಸ್ತೆಗಳು ಕೆಟ್ಟಿರುತ್ತವೆ. (ಪ್ರತಿಯೊಂದು ತಾಲ್ಲೂಕಿನ ವಿವರಗಳನ್ನು ಕೊಡುವುದು)

ಆ) ಇದರಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ಒಡೆದಿರುತ್ತವೆ ಮತ್ತು ಎಷ್ಟು ರಸ್ತೆಗಳು ಕೆಟ್ಟಿರುತ್ತವೆ ?

ಇ) ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ ?

ಈ) ಮೈಸೂರು ಜಿಲ್ಲೆಗೆ ವಿಶೇಷವಾಗಿ ಪಿರಿಯಾಪಟ್ಟಣಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ತಾಲ್ಲೂಕು	ರಸ್ತೆಗಳು	ಸೇತುವೆ ಅಡಿ ಸೇತುವೆ			ಸಣ್ಣ
		ಜಿ.ಪ.ಲೋ.ಇ.	ಜಿ.ಪ.	ಲೋಇ.	ನೀರಾವರಿ
ಕೊಳ್ಳೇಗಾಲ	9	–	1	–	–
ಪಿರಿಯಾಪಟ್ಟಣ	30	–	–	–	30
ಚಾಮರಾಜನಗರ	17	–	3	–	–
ಮೈಸೂರು ವಿಭಾಗ	–	56 ಕಿ.ಮೀ	–	–	–
ಚಾಮರಾಜನಗರ ವಿಭಾಗ	–	405 ಕಿ.ಮೀ	–	2	–

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಒಡೆದು ಹೋಗಿರುವ ಕೆರೆಗಳು ಮತ್ತು ರಸ್ತೆಗಳ ವಿವರ ಈ ಕೆಳಗಿನಂತಿವೆ.

ಕೆಟ್ಟಿರುವ ರಸ್ತೆಗಳು – 30
ಒಡೆದಿರುವ ಕೆರೆಗಳು – 12
ಹಾನಿಯಾದ ಕೆರೆಗಳು – 18

ಇ) ಒಡೆದು ಹೋಗಿರುವ, ಹಾನಿಯಾದ ಕೆರೆಗಳು ಮತ್ತು ಕೆಟ್ಟು ಹೋಗಿರುವ ರಸ್ತೆಗಳಿಗೆ ದುರಸ್ತಿಗಾಗಿ ಶೀಘ್ರವೇ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಮೈಸೂರು ಜಿಲ್ಲೆ ರೂ. 62.87 ಲಕ್ಷ
ಪಿರಿಯಾಪಟ್ಟಣ ತಾಲ್ಲೂಕು ರೂ. 2.10 ಲಕ್ಷ

ಬಿಡುಗಡೆ ಮಾಡಿದೆ.

ಇತ್ತೀಚಿನ ಪ್ರವಾಹದಿಂದ ಉಂಟಾಗಿರುವ ನಷ್ಟದ ಪ್ರಮಾಣ

193. 462. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚಿನ ಪ್ರವಾಹದಿಂದ ರಾಜ್ಯದಲ್ಲಿ ಉಂಟಾಗಿರುವ ಹಾನಿಯ ಪ್ರಮಾಣ (ಮನೆಗಳು, ಬೆಳೆಗಳು, ಪ್ರಾಣಿಗಳು ವಿವರಗಳು ಪ್ರತ್ಯೇಕವಾಗಿರಬೇಕು–ಭೂಸವೆತ, ರಸ್ತೆ, ಸೇತುವೆ, ಕಟ್ಟಡಗಳು, ಇತ್ಯಾದಿ ಸರ್ಕಾರಿ ಆಸ್ತಿ–ಪಾಸ್ತಿಗಳು)

ಆ) ನೆರೆ ಹಾವಳಿ ಪ್ರದೇಶಗಳಲ್ಲಿ ನೀಡಲಾದ ಸಹಾಯ ಧನದ ಮೊತ್ತ.

ಇ) ಪರಿಹಾರ ಧನದ ಪ್ರಮಾಣವನ್ನು ಏರಿಸುವ ಯಾವುದಾದರೂ ಪ್ರಸ್ತಾವನೆ ಇದೆಯೇ ?

ಈ) ಹಾಗಿದ್ದಲ್ಲಿ, ಎಷ್ಟು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) 1992ನೇ ನವೆಂಬರ್ ಮಾಹೆಯಲ್ಲಿ ಬೀಸಿದ ಚಂಡಮಾರುತದ ಪರಿಣಾಮವಾಗಿ ನಷ್ಟ ಹೊಂದಿದ ಸರ್ಕಾರಿ ಮತ್ತು ಖಾಸಗಿ ಆಸ್ತಿ–ಪಾಸ್ತಿಯ ವಿವರಗಳು:

ನಷ್ಟ ಹೊಂದಿದ ಖಾಸಗಿ ಆಸ್ತಿ–ಪಾಸ್ತಿಗಳು:

ಸಂಖ್ಯೆ		ನಷ್ಟ (ರೂ.ಕೋಟಿ)
1. ನಷ್ಟ ಹೊಂದಿದ ಮನೆಗಳು:		
ಭಾಗಶಃ – 221569		
ಪೂರ್ಣ – 56471	2,78,040	62.95
2. ಜಾನುವಾರುಗಳು	60751	3.51
3. ಬೆಳೆ ಹಾನಿ	3,13,200	140.47
	ಹೆಕ್ಟೇರ್	206.93

ನಷ್ಟ ಹೊಂದಿದ ಸರ್ಕಾರಿ ಆಸ್ತಿ–ಪಾಸ್ತಿಗಳು:

1. ರಸ್ತೆಗಳು 8448 ಕಿ.ಮೀ.	45.75
2. ಕಟ್ಟಡಗಳು ಸೇತುವೆಗಳು 2948	18.55
3. ಸಣ್ಣ ನೀರಾವರಿ ಕೆರೆಗಳು 964	10.78
4. ನೀರಾವರಿ ಕಾಲುವೆಗಳು 302	15.39
5. ಇತರೆ ಸರ್ಕಾರಿ ಆಸ್ತಿಪಾಸ್ತಿಗಳು 33	10.25
ಒಟ್ಟು	100.72

ಆ) ದಿನಾಂಕ 26.12.92ರವರೆಗೆ ಒಟ್ಟು 20.74 ಕೋಟಿ ರೂಪಾಯಿಗಳನ್ನು ಪರಿಹಾರ ಧನವಾಗಿ ನೀಡಲಾಗಿದೆ.

ಇ) ಹೌದು.

ಈ) ಇತ್ತೀಚಿನ ನೆರೆ ಹಾವಳಿಯಿಂದ ರಾಜ್ಯದ ಬಹಳಷ್ಟು ಜನತೆ ತೊಂದರೆಗೀಡಾದ್ದರಿಂದ, ಸರ್ಕಾರವು ತನ್ನ ಆದೇಶ ಸಂಖ್ಯೆ: ಆರ್‌ಡಿ 347 ಟಿಎನ್‌ಆರ್ 87 ದಿನಾಂಕ 4.12.92ರಲ್ಲಿ ಈ ಕೆಳಕಂಡ ಪ್ರಕರಣಗಳಲ್ಲಿ ಕೊಡಬೇಕಾಗಿರುವ ಪರಿಹಾರ ಧನದ ಮೊತ್ತವನ್ನು ಏರಿಸಿದೆ:

1. ಮೃತ ಹೊಂದಿದ ವ್ಯಕ್ತಿಯ ಹತ್ತಿರದ ವಾರಸುದಾರರಿಗೆ ನೀಡುವ ಪರಿಹಾರವನ್ನು ರೂ. 8000.00 ದಿಂದ ರೂ. 20000.00ಕ್ಕೆ ಏರಿಸಲಾಗಿದೆ. ಇದರೊಂದಿಗೆ ವಾರಸುದಾರರಿಗೆ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ರೂ. 20,000 ಮಂಜೂರು ಮಾಡಿದೆ.

2. ತೊಂದರೆಗೊಳಗಾದವರ ವಾರ್ಷಿಕ ವರಮಾನದ ಮಿತಿಯನ್ನು ರೂ. 6,400.00 ದಿಂದ ರೂ. 11,000.00ಕ್ಕೆ ಏರಿಸಲಾಗಿದೆ.

3. ಜಾನುವಾರುಗಳ ಲುಕ್ನಾನು ಪ್ರಕರಣದಲ್ಲಿ ಅಂದಾಜು ವೆಚ್ಚದ ಶೇಕಡಾ 25ರಷ್ಟು ನೀಡುತ್ತಿದ್ದ ಪರಿಹಾರವನ್ನು ಶೇಕಡಾ 50ಕ್ಕೆ ಏರಿಸಲಾಗಿದೆ.

4. ಬಾವಿ ನೀರಾವರಿ ಪಂಪ್‌ಸೆಟ್‌ಗಳ ದುರಸ್ತಿಗಾಗಿ ರೂ. 3000.00 ಪರಿಹಾರ ಧನ ನೀಡುವುದು.

5. ಪೂರ್ಣ ನಾಶಹೊಂದಿದ ಮನೆಗಳಿಗೆ ಪರಿಹಾರವಾಗಿ ರೂ.5000.00 ನೀಡುವ ಆದೇಶ. ಇದರಲ್ಲಿ ರೂ. 2000.00 ನಗದು ರೂಪದಲ್ಲಿ ಹಾಗೂ ರೂ. 3,000.00 ಕಟ್ಟಡ ಸಾಮಗ್ರಿಗಳ ರೂಪದಲ್ಲಿ ನೀಡಲಾಗುವುದು.

ಅತೀವೃಷ್ಟಿ ಪರಿಹಾರ ಕಾರ್ಯಗಳಿಗೆ ಕೇಂದ್ರ ಸರ್ಕಾರದಿಂದ ಕೋರಿರುವ ನೆರವಿನ ಮೊತ್ತ.

194. 129. ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಇದುವರೆಗೆ ವೆಚ್ಚ ಮಾಡಿರುವ ಹಣ ಎಷ್ಟು ?

ಆ) ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಕೇಂದ್ರದಿಂದ ಕೋರಲಾದ ನೆರವಿನ ಮೊತ್ತ ಎಷ್ಟು ?

ಇ) ಕೇಂದ್ರ ಸರ್ಕಾರದಿಂದ ದೊರೆತ ನೆರವಿನ ಮೊತ್ತ ಎಷ್ಟು ?

ಈ) ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಕೇಂದ್ರ ಬಿಡುಗಡೆ ಮಾಡಲು ಒಪ್ಪಿರುವ ನೆರವಿನ ಮೊತ್ತ ಎಷ್ಟು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ರಾಜ್ಯದಲ್ಲಿ ದಿನಾಂಕ 1.4.92 ರಿಂದ 24.12.1992ರವರೆಗೆ ಅತಿವೃಷ್ಟಿ ಪರಿಹಾರ ಕಾರ್ಯಗಳಿಗಾಗಿ ವೆಚ್ಚ ಮಾಡಿರುವ ಮೊತ್ತ ರೂ. 25.55 ಕೋಟಿ.

ಆ) ರೂ. 200.00 ಕೋಟಿ

ಇ) ಕೇಂದ್ರ ಸರ್ಕಾರವು ಈ ಕೆಳಕಂಡಂತೆ ನೆರವನ್ನು ಒದಗಿಸಿದೆ.

	ಕೋಟಿ ರೂ.ಗಳಲ್ಲಿ
1992–93ನೇ ಸಾಲಿಗೆ ಕೇಂದ್ರದಿಂದ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ವಂತಿಗೆ	20.25
1993–94ನೇ ಸಾಲಿನ 1 ಮತ್ತು 2ನೇ ಕಂತಿನ ಮುಂಗಡ ವಂತಿಗೆ –, 'ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ'.	10.12
ಒಟ್ಟು	30.37 ಕೋಟಿ

ಈ) ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವಿನ ಬಗ್ಗೆ ಆಶ್ವಾಸನೆ ಇಲ್ಲ. ಆದಾಗ್ಯೂ ರಾಜ್ಯ ಸರ್ಕಾರವು ಕೈಗೊಂಡಿರುವ ಪ್ರವಾಹ ಪರಿಹಾರ ಕಾರ್ಯಕ್ರಮಗಳಿಗೆ ಹೆಚ್ಚಿನ ಕೇಂದ್ರದ ನೆರವನ್ನು ಒದಗಿಸಲು ಒತ್ತಾಯಿಸಲಾಗಿದೆ.